ಹಿತ್ತಲಿನ ಬಾವಿಯಲ್ಲಿ ಹಾಕು' ಎಂದರು. ಆನಂದ ಮರು ಮಾತನಾಡದೇ ಹತ್ತು ರೂಪಾಯಿಯನ್ನು ಬಾವಿಯಲ್ಲಿ ಹಾಕಿ ಬಂದನು. ಎರಡನೇ ದಿನ ತನ್ನ ಅಕ್ಕನ ಬಳಿ ಕಾಡಿ ಬೇಡಿ ಹಣ ತಂದನು. ಎಂದಿನಂತೆ ತಂದೆಯವರು ಬಾವಿಯಲ್ಲಿ ಹಾಕಲು ಸೂಚಿಸಿದರು. ಏನನ್ನೂ ಯೋಚಿಸದೇ ಹಣವನ್ನು ಬಾವಿಯಲ್ಲಿ ಎಸೆದು ಬಂದನು. ತಂದೆಯವರು ತಾಯಿಗೆ ಮತ್ತು ಮಗಳಿಗೆ ಹಣ ನೀಡದಂತೆ ಎಚ್ಚರಿಕೆ ನೀಡಿದರು.

ಮಾರನೆ ದಿನ ಹಣ ಯಾರೂ ನೀಡದ ಕಾರಣ ಆನಂದ ಕಂಗಾಲಾದ. ಏನಾದರೂ ಕೆಲಸ ಮಾಡೋಣವೆಂದರೆ ಯಾರು ಕೆಲಸ ನೀಡುತ್ತಿಲ್ಲ. ಹಾಗೆಯೇ ಸುತ್ತುತ್ತಾ ಬಸ್ ನಿಲ್ದಾಣದ ಹತ್ತಿರ ಬಂದನು. ಅಲ್ಲಿ ಹಮಾಲರು ಬಸ್ಸಿನಿಂದ ಸಾಮಾನುಗಳನ್ನು ಇಳಿಸುತ್ತಿದ್ದರು. ಪ್ರಯಾಣಿಕರಿಂದ ಹಣ ಪಡೆಯುತ್ತಿದ್ದರು. ನಂತರ ಕೂಲಿ ಕೂಲಿ ಎಂದು ಕೂಗಿ ಬೇರೆ ಗಿರಾಕಿಗಳಿಗೆ ಹುಡುಕಾಟ ಮಾಡಲಾರಂಭಿಸಿದರು. ಇದನ್ನು ಕಂಡ ಆನಂದ ತಾನು ಕೂಲಿ ಬೇಕೇ ಕೂಲಿ ಎಂದು ಕೂಗತೊಡಗಿದ. ಆದರೂ ಒಬ್ಬರೂ ಇವನನ್ನು ಕರೆಯುತ್ತಿಲ್ಲ. ಚಿಂತೆಯಿಂದ ಕುಳಿತಿರಲು, ಒಂದು ಬಸ್ಸಿನಿಂದ ಇಳಿದು ಬಂದ ಒಬ್ಬ ಶೇಟ್‌ಜಿ ದೊಡ್ಡದೊಂದು ಸಂದೂಕದ ಬಳಿ ನಿಂತು 'ಏ ಕೂಲಿ ಬಾ ಇಲ್ಲಿ' ಎಂದನು. ಆನಂದ ಓಡುತ್ತ ಹೋಗಿ ಶೇಟ್‌ಜಿ ಬಳಿ ಕೈಕಟ್ಟಿ ನಿಂತನು. 'ಈ ಸಂದೂಕವನ್ನು ನನ್ನ ಮನೆಯ ಬಳಿ ಹೊತ್ತುಕೊಂಡು ನಡೆ ನಿನಗೆ ಹತ್ತು ರೂಪಾಯಿ ನೀಡುತ್ತೇನೆ' ಎಂದನು. ಮರುಮಾತನಾಡದೇ ಸಂದೂಕವನ್ನು ಹೊತ್ತು ನಡೆದ ಆನಂದ. ಸಂದೂಕು ಬಹಳ ಭಾರವಾಗಿತ್ತು. ಅದರ ಭಾರದಿಂದ ನೆತ್ತಿಯು ಉರಿಯುತ್ತಿತ್ತು. ನೋವಾಗಿ ಸಂಕಟವಾಯಿತು. ಆದರೂ ಸಂದೂಕವನ್ನು ಶೇಟ್‌ಜಿಯ ಮನೆಯವರೆಗೆ ತಂದು ಮುಟ್ಟಿಸಿದನು. ಶೇಟ್‌ಜಿ ಅವನಿಗೆ ಹತ್ತು ರೂಪಾಯಿ ಕೊಟ್ಟನು ಅದನ್ನು ತೆಗೆದುಕೊಂಡು ಮನೆಗೆ ಬಂದನು.

ಎಂದಿನಂತೆ ತಂದೆಗೆ ನೀಡಿದನು. ಅದನ್ನು ಬಾವಿಯಲ್ಲಿ ಚೆಲ್ಲುವಂತೆ ತಂದೆಯವರು ತಿಳಿಸಿದರು. ತಂದೆಯವರ ಮಾತು ಕೇಳುತ್ತಲೇ ಆನಂದನಿಗೆ ಸಿಟ್ಟು ಬರತೊಡಗಿತು. ಅದರ ಜೊತೆ ಅಳುವು ಬರಲಾರಂಭಿಸಿತು. ಕೋಪದಿಂದ ತಂದೆಗೆ 'ನಾನು ಎಷ್ಟು ಕಷ್ಟಪಟ್ಟು ಈ ಹಣವನ್ನು ತಂದಿರುವೆ ತಮಗೆ ತಿಳಿದಿದೆಯೇ. ಭಾರವಾದ ಪೆಟ್ಟಿಗೆಯನ್ನು ಹೊತ್ತು ಹಮಾಲಿ ಮಾಡಿ ಈ ಹಣ ತಂದಿರುವೆ. ಇಷ್ಟು ಕಷ್ಟಪಟ್ಟು ತಂದ ಹಣವನ್ನು ಬಾವಿಯಲ್ಲಿ ಚೆಲ್ಲುವಂತೆ ಹೇಳುತ್ತಿರುವಿರಿ ತಾವು ಸ್ವಲ್ಪ ಯೋಚಿಸಿ' ಎಂದು ಅಳತೊಡಗಿದನು.

ಆಗ ಪರಮಶೆಟ್ಟಿ ಮಗನನ್ನು ಕರೆದು ಸಂತೈಸಿ 'ಭಲೇ ಮಗನೇ ಇಂದು ನೀನು ನಿಜವಾಗಿಯೂ ಹಣವನ್ನು ಶ್ರಮವಹಿಸಿ ಸಂಪಾದಿಸಿ ತಂದಿರುವೆ. ಆದ್ದರಿಂದ ಹಣವನ್ನು ನೀರಿನಲ್ಲಿ ಚೆಲ್ಲಲು ನಿರಾಕರಿಸುತ್ತಿರುವೆ. ಹಿಂದಿನ ದಿನಗಳಲ್ಲಿ ನೀನು ಹಣ ಚೆಲ್ಲು ಎಂದಾಗ ಏನೂ ಹೇಳದೆ ಚೆಲ್ಲಿ ಬಂದಿದ್ದೆ. ಅವಾಗಲೇ ನೀನು ಹಣವನ್ನು ಸಂಪಾದಿಸಿ ತಂದಿಲ್ಲವೆಂದು ನನಗೆ ತಿಳಿದಿತ್ತು.

ನೋಡು ಮಗು ಕೇವಲ ಹತ್ತು ರೂಪಾಯಿ ಸಂಪಾದಿಸಲು ನಿನಗೆ ಇಷ್ಟು ಕಷ್ಟವಾಗಿದೆ. ನಾನು ಈ ಮನೆ, ಅಂಗಡಿ ಮತ್ತು ಹಣ ಸಂಪಾದಿಸಲು ಎಷ್ಟು ಕಷ್ಟಪಟ್ಟಿರಬಹುದು ಊಹಿಸು' ಎಂದು ಮಗನಿಗೆ ಶ್ರಮದ ದುಡಿಮೆಯ ಬಗ್ಗೆ ತಿಳಿ ಹೇಳಿದರು. ಆಗ ಆನಂದನಿಗೆ ನಿಜವಾಗಿಯೂ ಹಣದ ಗಳಿಕೆಯ ಕುರಿತು ಜ್ಞಾನೋದಯವಾಯಿತು. ಇಷ್ಟು ದಿನ ತಾನೂ ಹಣದ ಮಹತ್ವ ಅರಿಯದೇ ಧಾರಾಳವಾಗಿ ಖರ್ಚು ಮಾಡಿದ ಬಗ್ಗೆ ಕ್ಷಮೆ ಕೋರಿದನು. ಮರುದಿನದಿಂದ ತಂದೆಯೊಡನೆ ಕೆಲಸಕ್ಕೆ ಹೊರಟನು. ವ್ಯವಹಾರದಲ್ಲಿ ಸಹಕಾರಿಯಾಗಿ ನಿಂತನು. ಶ್ರಮದ ದುಡ್ಡಿನ ಬಗ್ಗೆ ಅರಿವು ಅವನಿಗಾಗಿತ್ತು.

■ **ಕೆ.ಪಿ. ರಾಮಗುಂಡಿ, ಬೈಲಹೊಂಗಲ**



# ಮೂರು ಪ್ರಶ್ನೆಗಳು

ಬೇಸಿಗೆ ಶಾಲೆಗೆ ರಜಾ ಇರುವುದರಿಂದ ಮಜವಾಗಿ ಕಳೆಯಲು ಅಜ್ಜಿ ಮನೆಗೆ ಮೊಮ್ಮಕ್ಕಳು ಬಂದಿದ್ದರು ರವಿ, ರಂಗ ಮತ್ತು ರಮಾ, ಉಮಾ. ಅವರೆಲ್ಲರೂ ಹಳ್ಳಿಯ ಸುಂದರ ಪರಿಸರಕ್ಕೆ ಮನಸೋತರು. ಆ ಹಳ್ಳಿಯ ಹತ್ತಿರದಲ್ಲೇ ಕಾಡಿನಲ್ಲಿ ಬೆಟ್ಟವಿತ್ತು. ಅವರೆಲ್ಲರೂ ಆ ಬೆಟ್ಟವನ್ನು ಹತ್ತಿ ಆನಂದಪಡುವಾಸೆಯಾಯಿತು. ಮನೆಯಲ್ಲಿ ಯಾರಿಗೂ ಹೇಳದೆ ಬೆಟ್ಟದತ್ತ ಹೊರಟರು. ಕಾಡಿನಲ್ಲಿ ನಡೆಯುತ್ತಿರುವಾಗ ರಂಗ, ರಮಾ, ಉಮಾ ಹಾದಿತಪ್ಪಿ ಕಾಡಿನಲ್ಲಿದ್ದ ಗುಹೆಯ ಹತ್ತಿರ ಬಂದರು. ಅದೊಂದು ಮಾಯಾವಿ ವಾಸವಾಗಿರುವ ಭಯಂಕರ ಗುಹೆ. ಅಲ್ಲಿರುವ ಮಾಯಾವಿ ರಾಕ್ಷಸನೊಬ್ಬ ಹಾದಿತಪ್ಪಿ ಗುಹೆಯೊಳಗೆ ಬಂದವರನ್ನು ಮೂರು ಪ್ರಶ್ನೆಗಳನ್ನು ಕೇಳುತ್ತಿದ್ದ. ಸರಿ ಉತ್ತರ ಕೊಡದವರನ್ನು ತನ್ನ ಮಾಯಾ ಶಕ್ತಿಯಿಂದ ಅವರನ್ನು ಪಕ್ಷಿಗಳನ್ನಾಗಿ ಮಾಡಿ ಪಂಜರದಲ್ಲಿ ಬಂಧಿಸಿ ಬಿಡುತ್ತಿದ್ದ. ಅನೇಕ ಜನರು ಪಕ್ಷಿಗಳಾಗಿ ಬಂಧನದಲ್ಲಿದ್ದರು. ಈ ವಿಷಯವರಿಯದ ಮಕ್ಕಳು ಗುಹೆಯನ್ನು ನೋಡುವ ತವಕದಿಂದ ಒಳಗೆ ಪ್ರವೇಶಿಸಿದರು. ಇವರನ್ನು ಕಂಡ ಆ ಮಾಯಾವಿ 'ಗಹಗಹಿಸಿ' ನಗುತ್ತಾ 'ಭಲೇ... ಭಲೇ! ಇಂದು ಒಳ್ಳೇ ಬೇಟೆಗಳೇ ದಕ್ಕಿದವು' ಎಂದು ಕಣ್ಣರಳಿಸಿದ. ವಿಚಿತ್ರಾಕೃತಿಯ ಮಾಯಾವಿ ಕಂಡು ಚಿಣ್ಣರು ಹೆದರಿದರು. ಹಾಗೇಯೇ ನಡುಗುವ ಧ್ವನಿಯಲ್ಲಿ ಕೇಳಿದರು.

'ಯಾರು ನೀನು?' ಎಂದಾಗ ಆ ಮಾಯಾವಿಯಿಂದ. 'ನಾನೊಬ್ಬ ಮಾಂತ್ರಿಕ! ನನ್ನ ಮೂರು ಪ್ರಶ್ನೆಗಳಿಗೆ ನೀವು ಸರಿಯಾದ ಉತ್ತರ ಕೊಟ್ರೆ ಮಾತ್ರ ನಿಮ್ಮನ್ನು ಬಿಡುವೆ ಇಲ್ಲವಾದ್ರೇ ಪಕ್ಷಿಗಳನ್ನಾಗಿ ಮಾಡಿ ಬಂಧಿಸುವೆ. ಅಲ್ಲಿ ನೋಡಿ... ಎಷ್ಟೊಂದು ಮಾನವರು ಉತ್ತರಿಸಲಾಗದೆ ಪಕ್ಷಿಗಳಾಗಿ ಸೆರೆಯಾಗಿದ್ದಾರೆ' ಎಂದು ಹೇಳಿ ಮೂರು ಪ್ರಶ್ನೆಗಳನ್ನು ಕೇಳಿದ. ಪಾಪ! ಅವರ್‍ಯಾರಿಗೂ ಸರಿ ಉತ್ತರ ಹೊಳೆಯದೆ ಮೌನವಾದಾಗ ಆ ಮಾಯಾವಿ ಅವರೆಲ್ಲರನ್ನೂ ಪಕ್ಷಿಗಳಾಗಿ ಬಂಧಿಸಿಟ್ಟ.

ಇತ್ತ, ರವಿ ಇವರನ್ನು ಹುಡುಕುತ್ತಾ ಗುಹೆಯೊಳಗೆ ಬಂದಾಗ ಮಾಯಾವಿಯಿಂದ ಎಲ್ಲಾ ವಿಷಯ ಅರಿತ. ರವಿ ತುಂಬಾ ಜಾಣ. 'ಸರಿ ನೀನು ಪ್ರಶ್ನೆಗಳನ್ನು ಕೇಳು ಉತ್ತರಿಸುವೆ' ಎಂದ ಧೈರ್ಯದಿಂದ. ಮಾಯಾವಿ ಮೂರು ಪ್ರಶ್ನೆಗಳನ್ನು ಕೇಳಿದ– 'ಬೆಂಕಿಗಿಂತ ಬಿಸಿ ಯಾವುದು? ನೀರಿಗಿಂತ ತಂಪು ಏನದು? ಗಾಳಿಗಿಂತ ವೇಗವಾಗಿ ಓಡುವುದ್ಯಾವುದು?' ರವಿ ಚಾಣಾಕ್ಷತನದಿಂದ ಉತ್ತರಿಸಿದ.

'ಕೋಪ ಬೆಂಕಿಗಿಂತ ಬಿಸಿ, ಶಾಂತಿ ನೀರಿಗಿಂತ ತಂಪು, ಮನಸ್ಸು ಗಾಳಿಗಿಂತಲೂ ವೇಗವಾಗಿ ಓಡುವುದು' ಈ ಉತ್ತರಗಳಿಂದ ಸಂತೃಪ್ತಗೊಂಡ ಮಾಯಾವಿ ಅದುವರೆಗೂ ಬಂಧಿಸಿಟ್ಟ ಎಲ್ಲಾ ಮಾನವರನ್ನು ಬಿಡುಗಡೆ ಮಾಡಿದ. ಪಂಜರದ ಬಂಧನದಿಂದ ಮುಕ್ತರಾದವರು ರಂಗ, ರಮಾ, ಉಮಾ ಮತ್ತು ರವಿಗೆ ತಮ್ಮನ್ನು ಕಾಪಾಡಿದ್ದಕ್ಕೆ ಅಭಿನಂದಿಸಿದರು.

■ **ಮರಯ್ಯ ಪತ್ರಿಮಠ, ಸುರಪುರ**